# ಅಡುಗೂಲಜ್ಜಿ: ಸ್ತ್ರೀ ಸಂವೇದನೆಯ ನೆಲೆಯಲ್ಲಿ

**ಮಹದೇವಸ್ವಾಮಿ ಎಂ.[1] & ಬಿ. ಪ್ರಭುಸ್ವಾಮಿ[2]**

[1]ಸಂಶೋಧನಾರ್ಥಿ, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

[2]ಸಹಾಯಕ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

**Received: 12-03-2024 ; Acepted: 10-05-2024 ; Published: 08-06-2024**

**DOI: https://doi.org/10.5281/zenodo.11525845**

## ABSTRACT:

ನಮ್ಮ ಸಮಾಜವನ್ನು ಮೇಲು-ಕೀಳು, ಬಡವ-ಬಲ್ಲಿದ, ಸ್ತ್ರೀ-ಪುರುಷ ಎಂಬ ಅಸಮಾನತೆಗಳು ಹಿಂದಿನಿಂದಲೂ ಕಾಡುತ್ತಿವೆ. ಇವು ಕಾಲದಿಂದ ಕಾಲಕ್ಕೆ ಬದಲಾಗಿ ಬೇರೆ ಬೇರೆ ರೂಪ ತಾಳಿ ಮುಂದುವರಿಯುತ್ತಿವೆ. ಇವು ನಿರ್ಮೂಲನೆಯಾಗಬೇಕು, ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕು. ಅನಾದಿ ಕಾಲದಿಂದಲೂ ನಡೆಯುತ್ತಿರುವ ಸ್ತ್ರೀ ಮೇಲಿನ ಶೋಷಣೆ, ದಬ್ಬಾಳಿಕೆಗಳು ನಿಲ್ಲಬೇಕು. ಸ್ತ್ರೀಯು ಪುರುಷನಷ್ಟೇ ಸಮರ್ಥಳು, ಅವಳನ್ನು ಅವಕಾಶ ವಂಚಿತಳನ್ನಾಗಿ ಮಾಡಬಾರದು. ಸ್ತ್ರೀ ಅಬಲೆಯಲ್ಲ ಸಬಲಳು ಎಂಬುದನ್ನು ಎಚ್. ಡುಂಡಿರಾಜ್ ಅವರು ತಮ್ಮದೇ ಹಾಸ್ಯ ಧಾಟಿಯ ಮೂಲಕ ಅಡುಗೂಲಜ್ಜಿ ನಾಟಕದಲ್ಲಿ ಚಿತ್ರಿಸಿದ್ದಾರೆ.

## KEYWORDS:

ಸ್ತ್ರೀ ಸಂವೇದನೆ, ಅಡುಗೂಲಜ್ಜಿ, ಶೋಷಣೆ, ಪುರುಷ ಸಿಂಹ, ನಾಟ್ಯಾಚಾರ್ಯ, ವರದಕ್ಷಿಣೆ, ಸಬಲೆ, ಪ್ರೇಕ್ಷಕರು.

ಸಾಹಿತ್ಯದ ಮುಖ್ಯ ಗುರಿ ಮನರಂಜನೆಯ ಜೊತೆಗೆ ಮೌಲ್ಯಗಳನ್ನು ಕಟ್ಟಿಕೊಡುವಂಥದ್ದೂ ಆಗಿರುತ್ತದೆ. ಜನ ಜೀವನದ ಆಯಾಮಗಳು, ಅನುಭವಗಳು, ಆಲೋಚನೆಗಳು, ಅಭಿಪ್ರಾಯಗಳು ಭಿನ್ನ ಭಿನ್ನವಾಗಿರುವಂತೆ ಸಾಹಿತ್ಯದ ವಸ್ತು, ರೂಪಗಳು ಭಿನ್ನ ಭಿನ್ನವಾಗಿವೆ. ಕಥೆ, ಕಾದಂಬರಿ, ನಾಟಕ, ಸಣ್ಣಕಥೆ ಮುಂತಾದ ಸಾಹಿತ್ಯ ಪ್ರಕಾರಗಳ ರೂಪಗಳು ಬೇರೆ ಬೇರೆಯಾಗಿದ್ದರೂ ಅದರ ಮೂಲ ಸಮಾಜವೇ ಆಗಿದೆ. ಅದರಂತೆ ಬರಹಗಾರ ಈ ಲೋಕದ ಅನುಭವಗಳನ್ನು ತನ್ನ ಬರವಣಿಗೆಯ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡುತ್ತಾನೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಮಾಜ ಒಳಗೊಂಡಿರುವ ನಂಬಿಕೆ, ಸಂಪ್ರದಾಯ, ಆಚರಣೆ, ಸಮಾನತೆ, ರಾಜಕೀಯ, ಭ್ರಷ್ಟಾಚಾರ, ಕೋಮುವಾದ ಮುಂತಾದ ಎಲ್ಲಾ ವಿಷಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸುವ ಪ್ರಯತ್ನ ನಡೆಯುತ್ತಿದೆ. ಆ ಹಿನ್ನೆಲೆಯಲ್ಲಿ ನೋಡುವುದಾದರೆ ನಾಟಕ ಸಾಹಿತ್ಯವೂ ಕೂಡ ಒಂದು ಮನರಂಜನೆ ಮಾಧ್ಯಮವಾಗಿದ್ದರೂ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ನಾಟಕದ ಪಾತ್ರವೂ ಗಮನಾರ್ಹವಾದುದೇ ಆಗಿದೆ. ಪ್ರಸ್ತುತ ಮನುಷ್ಯ ಮನರಂಜನೆಗಾಗಿ ಇಂದು ಹೊಸ ಹೊಸ ಆವಿಷ್ಕಾರಗಳನ್ನು ಕಂಡುಹಿಡಿದಿದ್ದರೂ ನಾಟಕ ಇಂದಿಗೂ ತನ್ನದೇ ಆದ ಮಹತ್ವವನ್ನು ಉಳಿಸಿಕೊಂಡು ಬಂದಿದೆ. ಪ್ರೇಕ್ಷಕರ ಕಣ್ಣೆದುರಿಗೆ ನಡೆಯುವ ನಾಟಕ ಅಭಿನಯ, ಭಾಷೆ, ನಟನೆ, ನೃತ್ಯ, ಸಂಗೀತಗಳ ಮೂಲಕ ಮನಸ್ಸಿಗೆ ನೇರವಾಗಿ ಮುಟ್ಟುತ್ತದೆ.

ಈ ರೀತಿಯ ನಾಟಕ ಸಾಹಿತ್ಯದಲ್ಲಿ ಮಕ್ಕಳ ನಾಟಕಗಳು ಹೆಚ್ಚು ಮೌಲ್ಯವನ್ನು, ನೀತಿಪಾಠಗಳನ್ನು, ತತ್ವಗಳನ್ನು ಒಳಗೊಂಡಿರುತ್ತವೆ. ಪ್ರಾರಂಭದಿಂದ ಕೊನೆಯ ಘಟ್ಟದವರೆವಿಗೂ ಪ್ರೇಕ್ಷಕರನ್ನು ರಂಜಿಸಿ ಕೊನೆಯಲ್ಲಿ ನೀತಿಪಾಠವನ್ನು, ಮೌಲ್ಯವನ್ನು ತಿಳಿಸಿ ಸಾಮಾಜಿಕ ಜವಾಬ್ದಾರಿಯನ್ನು ತಿಳಿಸುವುದು ಮಕ್ಕಳ ನಾಟಕದ ಸಾಮಾನ್ಯ ಉದ್ದೇಶವಾಗಿರುತ್ತದೆ. ಮಕ್ಕಳ ಸಾಹಿತ್ಯ ಸಾಮಾನ್ಯವಾಗಿ ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಗಳನ್ನು ರೂಪಿಸಿ, ಭಾವನೆಗಳನ್ನು ಬಿತ್ತಿ, ಮನರಂಜಿಸುವ, ಸಂತೋಷಿಸುವ ಗುಣವನ್ನು ಹೊಂದಿರುತ್ತದೆ. ಕನ್ನಡದಲ್ಲಿ ಈ ನಾಟಕಗಳು ಸಮೃದ್ಧವಾಗಿಲ್ಲದಿದ್ದರು ನಡೆದ ಪ್ರಯತ್ನಗಳು ಉಲ್ಲೇಖನೀಯವಾಗಿವೆ.

ಹಿಂದೆ ನಮ್ಮ ಅಜ್ಜಿಯಂದಿರು ಹೇಳುತ್ತಿದ್ದ ಕಥೆಗಳು, ಒಗಟುಗಳು, ಲಾಲಿಪದಗಳು, ಪಂಚತಂತ್ರದಂತಹ ಕಥೆಗಳು ಮಕ್ಕಳ ಕುತೂಹಲ ಕೆರಳಿಸಿ, ಸಂತೋಷವನ್ನು ಉಂಟುಮಾಡುವುದರ ಜೊತೆಗೆ ನೀತಿಯನ್ನು ಬೋಧಿಸುತ್ತಿದ್ದವು. ಮಕ್ಕಳ ನಾಟಕಗಳು ಮಕ್ಕಳಿಗೆ ಅನುಭವದ ಬುತ್ತಿಯನ್ನು ನೀಡಬೇಕು. ಮಕ್ಕಳ ಭಾಷಿಕ ಬೆಳವಣಿಗೆ ಜೊತೆಗೆ ಬೌದ್ಧಿಕ ಮಟ್ಟದ ಬೆಳವಣಿಗೆಯೂ ಆಗಬೇಕು. ಸಮಾಜ ಒಳಗೊಂಡಿರುವ ಮೂಢನಂಬಿಕೆ, ಅಸಮಾನತೆ, ಶೋಷಣೆ, ದೌರ್ಜನ್ಯ, ಭ್ರಷ್ಟತೆ ಮುಂತಾದ ಸಮಸ್ಯೆಗಳನ್ನು ತಿಳಿಸಿಕೊಡುವುದರ ಜೊತೆಗೆ ಅವುಗಳತ್ತ ಸುಳಿಯದಂತೆ, ಕಂಡಲ್ಲಿ ಅವುಗಳನ್ನು ವಿರೋಧಿಸುವ ಮನೋಭಾವವನ್ನು ಬಿತ್ತಿ ಬೆಳೆಸಬೇಕು. ಅದನ್ನು ಅಲ್ಪವಾದರೂ ತಡೆಗಟ್ಟುವ ನೀತಿನಿಯಮಗಳನ್ನು ರೂಪಿಸುವಲ್ಲಿ ಮಕ್ಕಳ ನಾಟಕಗಳು ಕೆಲಸ ಮಾಡುತ್ತಿವೆ. ಈ ನಿಟ್ಟಿನಲ್ಲಿ ನಾಟಕ ಸಾಹಿತ್ಯ ಪ್ರಸ್ತುತ ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ. ಮಕ್ಕಳ ನಾಟಕ ಸಾಹಿತ್ಯವನ್ನು ಉಳಿಸಿ ಬೆಳೆಸುತ್ತಿರುವವರಲ್ಲಿ ಎಚ್. ಡುಂಡಿರಾಜರು ಪ್ರಮುಖರಾಗಿದ್ದಾರೆ. ಇವರ ಹಾಸ್ಯ ಪ್ರಜ್ಞೆ, ವ್ಯಂಗ್ಯದೃಷ್ಟಿ, ವಿಚಾರಪರತೆ ಹಾಗೂ ತೀವ್ರ ಭಾವನಾಮಯತೆ ಎಲ್ಲಾ ನಾಟಕಗಳಲ್ಲೂ ಸರ್ವೇಸಾಮಾನ್ಯವಾಗಿದೆ. ಸ್ವತಃ ನಾಟಕಕಾರರಾಗಿ ರಂಗಭೂಮಿಯ ಹಿನ್ನೆಲೆಯನ್ನು ಬಲ್ಲವರಾಗಿರುವ ಡುಂಡಿರಾಜರು ನಾಟಕಗಳನ್ನು ರಚಿಸಲು ತಮ್ಮ ಈ ಅನುಭವವನ್ನು ಬಳಸಿಕೊಂಡಿದ್ದಾರೆ. ರಂಗಭೂಮಿಗೆ ಹೊಂದಿಕೊಳ್ಳುವ ನಾಟಕ ತಂತ್ರ, ನವಿರಾದ ಹಾಸ್ಯ, ಸಾಮಾಜಿಕ ವಿಡಂಬನೆ, ಮನರಂಜನೆ, ವೈಚಾರಿಕತೆ, ಹರಿತ ಸಂಭಾಷಣೆ, ನಾಟ್ಯ ಗುಣವುಳ್ಳ ರಂಗಗೀತೆಗಳು, ನಾಟಕೀಯ ಗುಣ, ಕಲಾತ್ಮಕತೆ ಮುಂತಾದವುಗಳಿಂದ ಅವರ ನಾಟಕಗಳು ಕನ್ನಡ ರಂಗಭೂಮಿಗೆ ಹೊಸ ಆಯಾಮ ನೀಡಿವೆ.

ಸಮಕಾಲೀನ ವಿದ್ಯಮಾನ, ರಾಜಕೀಯ ಅಧಃಪತನ, ಸಾಮಾಜಿಕ ಪಲ್ಲಟ, ಸಾಂಸ್ಕೃತಿಕ ತಲ್ಲಣಗಳಿಗೆ ಅವರು ನಾಟಕದೊಳಗೆ ಪ್ರತಿಕ್ರಿಯಿಸಿರುವ ಬಗೆ ಗಮನಾರ್ಹವಾದುದು. ಡುಂಡಿರಾಜರ ನಾಟಕಗಳಲ್ಲಿ ಹಾಡಿದೆ, ಕುಣಿತವಿದೆ, ಮೇಳವಿದೆ, ಕಥೆಯಿದೆ, ಉತ್ಸವ ಹಾಗೂ ಆಚರಣೆ ಪರಂಪರೆಗಳ ಹಿನ್ನೆಲೆಯಿದೆ, ಹೊಸತು ಹಳೆಯದರ ಮುಖಾಮುಖಿ, ಸಂಧಾನ, ಸಮನ್ವಯತೆಗಳಿಂದ ಬದುಕಿನ ವೈವಿಧ್ಯತೆಯೂ ಕೂಡ ಕಾಣುತ್ತದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ತನ್ನ

ಮುಡಿಗೇರಿಸಿಕೊಂಡಿರುವ ಅಜ್ಜಿಕಥೆ ಎಂಬ ಮಕ್ಕಳ ನಾಟಕವು ಕರ್ನಾಟಕದಾದ್ಯಂತ ಹಲವು ಪ್ರದರ್ಶನ ಕಂಡು ಯಶಸ್ವಿಯಾಗಿದೆ. 1994 ರಲ್ಲಿ ರಚನೆಗೊಂಡ ಈ ನಾಟಕವು ಮಕ್ಕಳು ಅಭಿನಯಿಸಬಹುದಾದ 7 ದೃಶ್ಯಗಳನ್ನು ಒಳಗೊಂಡ ಒಂದು ಸಣ್ಣ ನಾಟಕವಾಗಿದ್ದರೂ ಸ್ತ್ರೀ ಸಂವೇದನೆಯನ್ನು ಒಳಗೊಂಡು ಮಹತ್ವವೆನಿಸಿದೆ. ವಿಶೇಷವಾಗಿ ಮಕ್ಕಳೇ ಅಭಿನಯಿಸಲು ರಚಿಸಲಾದ ನಾಟಕವಾಗಿದ್ದರೂ ಮಕ್ಕಳಿಗಾಗಿ ದೊಡ್ಡವರು ಅಭಿನಯಿಸಬಹುದಾದ ನಾಟಕ ಇದಾಗಿದೆ. ಸಮಕಾಲೀನ ಸಮಾಜದ ಅಂಕುಡೊಂಕುಗಳನ್ನು ಹಾಸ್ಯಮಯವಾಗಿ ಈ ನಾಟಕದಲ್ಲಿ ಚಿತ್ರಿಸಿದ್ದಾರೆ.

**ನಾಟಕದ ವಸ್ತು ವಿಶ್ಲೇಷಣೆ:**

7 ದೃಶ್ಯಗಳಲ್ಲಿ ಈ ನಾಟಕ ಹರಡಿದೆ. ಪುಟ್ಟ ಪುಟ್ಟಿ ಎಂಬ ಸೂತ್ರಧಾರರ ಪ್ರವೇಶದೊಂದಿಗೆ ನಾಟಕ ಪ್ರಾರಂಭವಾಗುತ್ತದೆ. ಈ ನಾಟಕದ ಮುಖ್ಯ ಪಾತ್ರವಾಗಿರುವ ಅಜ್ಜಿಯ ಮೂಲಕವೇ ಕಥೆಯನ್ನು ಎಣೆದಿರುವುದು ಕೂಡ ಸ್ತ್ರೀ ಸಂವೇದನೆ ನೆಲೆಗೆ ಹಾಗೂ ಈ ನಾಟಕದ ಆಶಯಕ್ಕೆ ಪೂರಕವಾಗಿದೆ.

'ಅಜ್ಜಿ ಅಜ್ಜಿ ಅಡುಗೂಲಜ್ಜಿ' ಎಂಬುದಾಗಿ ಕಥೆಯನ್ನು ಪ್ರಾರಂಭಿಸಿರುವುದು ಹೆಣ್ಣಿನ ಕಾಯಕವನ್ನು ಗುರುತುಮಾಡಿ ಹೇಳಿದಂತಿದೆ. ಹಿಂದಿನಿಂದಲೂ ಹೆಣ್ಣೆಂದರೆ ಆಕೆ ಹೀಗೆ ಇರಬೇಕು ಅವಳು ಈ ಕೆಲಸವನ್ನೇ ನಿರ್ವಹಿಸಬೇಕು ಎಂಬುದು ರೂಢಿಯಾಗಿದೆ. ಮನೆಯಲ್ಲಿನ ಕೆಲಸಗಳು, ಅಡುಗೆ ಕೆಲಸ, ಬಟ್ಟೆ ತೊಳೆಯುವುದು, ಮನೆ ಸ್ವಚ್ಛಮಾಡುವುದು ಮುಂತಾದ ಎಲ್ಲಾ ಮನೆ ಕೆಲಸಗಳನ್ನು ಸ್ತ್ರೀ ನಿರ್ವಹಿಸಬೇಕು. ಮನೆ ಹೊರಗಿನ ಕೆಲಸಗಳನ್ನು ಗಂಡು ನಿರ್ವಹಿಸಬೇಕು ಎಂಬ ಪರಿಪಾಠಗಳು ಹೆಣ್ಣು ನಾಲ್ಕು ಗೋಡೆಗಳ ಒಳಗಡೆಗೆ ಸೀಮಿತವಾಗಬೇಕು ಎಂಬುದನ್ನು ನಿರ್ಧರಿಸಿದಂತಿದೆ. 'ಹೆಣ್ಣಿನ ಜೀವನದ ವೇಳಾಪಟ್ಟಿ ನಿರ್ಮಾಣ ಮಾಡಿಕೊಟ್ಟವರು ಪುರುಷರು. ಅವಳ ಧರ್ಮ, ನೀತಿ, ಜೀವನವನ್ನು ನಿರ್ಧರಿಸಿದವರು ಪುರುಷರು; ಅವಳ ಮುಂದೆ ಆದರ್ಶವನ್ನು ಇಟ್ಟವರು ಪುರುಷರು. ಆ ಆದರ್ಶಗಳು ಹೆಣ್ಣಿನ ಆದರ್ಶಗಳಲ್ಲ ಗಂಡಿನ ಆದರ್ಶಗಳು. ಗಂಡಿಗೆ ಅನುಕೂಲವಾಗುವ ಆದರ್ಶಗಳು. ಗಂಡು ಯಾವಾಗ ಶೋಷಕನಾಗಿ ನಿಂತುಕೊಂಡು ಹೆಣ್ಣನ್ನು ಶೋಷಿಸಲಾರಂಭಿಸಿದನೋ ಆಗಲೇ ನಮ್ಮ ನೈತಿಕ, ಮಾನಸಿಕ, ಸಾಮಾಜಿಕ, ರಾಷ್ಟ್ರೀಯ ಪತನವಾರಂಭವಾಯಿತು.'[1] ಹೆಣ್ಣು ಮೂಲವಾಗಿ ಕುಟುಂಬದಿಂದಲೇ ಶೋಷಣೆಗೆ ಒಳಗಾಗಿದ್ದಾಳೆ ಎಂಬುದು ನಮಗೆ

ವೇದ್ಯವಾಗುತ್ತದೆ. ಅದು ಬಳುವಳಿಯಾಗಿ ಮುಂದುವರೆದು ಇಂದು ಸಾಮಾಜಿಕವಾಗಿ ಹಬ್ಬಿ ಹರಡಿದೆ. ಹಣಕಾಸಿನ ವ್ಯವಹಾರ, ಕುಟುಂಬದ ಆರ್ಥಿಕ ನಿರ್ವಹಣೆ ಗಂಡಿನ ಜವಾಬ್ದಾರಿಯಾಗಿದ್ದರೆ, ಕುಟುಂಬದ ಎಲ್ಲಾ ಸದಸ್ಯರನ್ನು ಸಂತೈಸುವ, ಪೋಷಿಸುವ ಜವಾಬ್ದಾರಿಯನ್ನು ಹೆಣ್ಣು ಹೊರುತ್ತಿರುತ್ತಾಳೆ. ಮನೆ ಹೊರಗೆ ಒಂದೇ ಕೆಲಸ ನಿರ್ವಹಿಸುವ ಗಂಡಿಗಿಂತ ಮನೆಯಲ್ಲೇ ಅನೇಕ ಕೆಲಸಗಳನ್ನು ಮಾಡಿ ಮನೆಯವರೆಲ್ಲರನ್ನು ಸಂತೈಸುವ ಹೆಣ್ಣಿನ ಜವಾಬ್ದಾರಿ ಹೆಚ್ಚಾಗಿಯೇ ಇದೆ. ಮಹಿಳೆಯರು ಪುರುಷರಿಗಿಂತ ಯಾವ ವಿಧದಲ್ಲೂ ಕೀಳಿಲ್ಲ ಮತ್ತು ಪುರುಷರಂತೆಯೇ ಅವರು ಎಂತಹ ಜವಾಬ್ದಾರಿಯನ್ನಾದರೂ ಹೊರಬಲ್ಲರು. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಅವಳನ್ನು ಸೀಮಿತಗೊಳಿಸಿ ಇದೆಲ್ಲದರಿಂದ ಗೌಣವಾಗಿಸುವ ಪ್ರಯತ್ನ ಮಾಡಲಾಗಿದೆ. 'ಆಧುನಿಕ ಕಾಲಕ್ಕೆ ಹೆಣ್ಣು, ಕುಟುಂಬದ ಸಲುವಾಗಿಯೇ ಮನೆಯ ನಾಲ್ಕು ಗೋಡೆಯಾಚೆಗೆ ಕಾಲಿಟ್ಟು ದುಡಿಯತೊಡಗಿದ್ದಾಳೆ. ಕುಟುಂಬದ ನಿರೀಕ್ಷೆಗಳು ಈ ವಲಯಕ್ಕೂ ಪ್ರವೇಶಿಸಿ ಅವಳನ್ನು ನಿಯಂತ್ರಿಸುತ್ತವೆ'.[2] ಈ ನಿಯಂತ್ರಣ ನಿಲ್ಲಬೇಕು, ಅವಕಾಶಗಳನ್ನೊದಗಿಸಬೇಕು. ಮನುಷ್ಯತ್ವದಿಂದ ಗೌರವಿಸಬೇಕು. ನಮ್ಮ ಸಮಾಜ ಸ್ತ್ರೀಯನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಅವರ ಮೇಲಿನ ಹಿಂಸೆ, ಲೇವಡಿ ನಿಲ್ಲಬೇಕು. ಸಮಾಜದ ಮುಖ್ಯವಾಹಿನಿಯಲ್ಲಿ ಅವರು ಎಲ್ಲರಂತೆ ಬದುಕುವಂತಾಗಬೇಕು. ಅಂದಾಗ ಮಾತ್ರ ಸಮಾಜದಲ್ಲಿ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.

'ಕಥೆ ಹೇಳೋದು ಅಜ್ಜಿ ಕೆಲಸ ಇಸ್ಪೀಟು ಆಡೋದು ಅಜ್ಜನ ಕೆಲಸ' ಎಂಬ ಅಜ್ಜಿಯ ನಿಟ್ಟುಸಿರಿನ ಮಾತುಗಳಲ್ಲಿ ಗಂಡು ಸ್ವತಂತ್ರನು, ಆತನಿಗೆ ಯಾವ ಕಟ್ಟುಪಾಡುಗಳಿಲ್ಲ. ಮದ್ಯಪಾನ, ಧೂಮಪಾನ, ಇಸ್ಪೀಟು, ಮುಂತಾದ ಯಾವ ಚಟಗಳಿದ್ದರೂ ಅದು ಆತನ ಘನತೆ, ಗೌರವ. ಆದರೆ ಇದು ಸ್ತ್ರೀಗೆ ಸಲ್ಲದು. ಆಕೆ ಕತೆ ಹೇಳಿಕೊಂಡು, ಮನೆಗೆಲಸ ಮಾಡಿಕೊಂಡು ಇರಬೇಕು. ಇದು ಸನಾತನ ಮೌಲ್ಯ. ಇಂತಹ ಕಟ್ಟುಪಾಡುಗಳು ಪುರುಷನ ಸ್ವೇಚ್ಛಾಚಾರವನ್ನು, ಸ್ತ್ರೀಯ ಶೋಷಣೆಯನ್ನು ತಿಳಿಸುತ್ತವೆ. ಈ ಮೌಲ್ಯ ಬದಲಾಗಬೇಕು. ಬದಲಾಗಬೇಕು ಎಂದರೆ ಸ್ತ್ರೀಗೂ ಆ ಅವಕಾಶ ನೀಡಬೇಕು ಎನ್ನುವುದಲ್ಲ. ಇವುಗಳೆಲ್ಲ ಪುರುಷತ್ವದ ಸಂಕೇತಗಳು ಎಂಬ ಮನೋಭಾವನೆ ಬದಲಾಗಬೇಕು, ಅದರಿಂದಾಚೆಗೆ ಪುರುಷ ಹೊರಬರಬೇಕು. 'ಒಬ್ಬ ಪುರುಷ ಸಿಂಹನಿಗೆ 8 ಜನ ಮಡದಿಯರು ಇದ್ದರು'

ಎಂಬ ವಾಕ್ಯವೂ ಕೂಡ ಪುರುಷ ದಬ್ಬಾಳಿಕೆ, ದೌರ್ಜನ್ಯ ಹಾಗೂ ಗಂಡಿನ ಕಾಮಪಿಪಾಸುತನವನ್ನು ತೋರಿಸುತ್ತದೆ. ಪುರುಷನ ಭೋಗ ವಿಲಾಸಕ್ಕೆ ಜಗತ್ತಿನಲ್ಲಿ ನಿರ್ಮಿತವಾಗಿರುವ ವಸ್ತುಗಳಲ್ಲಿ ಹೆಣ್ಣು ಕೂಡ ಒಂದು. ಜೊತೆಗೆ ಮುಖ್ಯವಾದದ್ದು. ಇದೂ ಕೂಡ ಹೆಣ್ಣಿನ ಬಗೆಗೆ ಪುರುಷ ಸಮಾಜ ಹೊಂದಿರುವ ಕೆಟ್ಟ ಆಲೋಚನೆಯನ್ನು ತಿಳಿಸುತ್ತದೆ. ಹಿಂದೆ ಒಬ್ಬ ರಾಜಕುಮಾರ ಒಂದಕ್ಕಿಂತ ಹೆಚ್ಚು ವಿವಾಹವನ್ನು ಆಗಬಹುದಿತ್ತು. ಆದರೆ ಹೆಣ್ಣಿಗೆ ಆ ಅವಕಾಶವಿರಲಿಲ್ಲ. ಬದಲಾಗಿ ಸತಿಸಹಗಮನಗಳಂತಹ ಹೆಣ್ಣನ್ನು ಹಿಂಸಿಸುವ ಪದ್ಧತಿ ಜಾರಿಯಲ್ಲಿದ್ದವು. 'ಮೌಢ್ಯದಿಂದ ಮಾನವತೆಯ ವಿರುದ್ಧ ಕೆಲವೊಂದು ಆಚರಣೆಗಳು ರೂಪುಗೊಂಡವು, ನಂತರ ಹುಟ್ಟಿಕೊಂಡ ಧರ್ಮ, ಜಾತಿಗಳು ಕೂಡ ಮಹಿಳೆಯರನ್ನು ಅವಕಾಶಗಳಿಂದ ವಂಚಿಸಿಬಿಟ್ಟವು. ಮಾನಸಿಕ ಮತ್ತು ದೈಹಿಕ ಹಿಂಸೆಗೆ ಒಳಗಾದ ಮಹಿಳೆಯು ಎಂದೂ ಕೂಡ ಅದರ ವಿರುದ್ಧವಾಗಿ ಪ್ರಶ್ನೆ ಮಾಡಲೇ ಇಲ್ಲ'.[3] ಅಂತಹ ಹಿಂಸೆಗಳ ವಿರುದ್ಧ ಧ್ವನಿ ಎತ್ತದಂತೆಯೂ ಮಹಿಳೆಯರನ್ನು ಹತ್ತಿಕ್ಕಲಾಗಿತ್ತು. ಇದರಿಂದ ಪತಿಯೇ ಪರದೈವವೆಂಬಂತೆ ಇರುತ್ತಿದ್ದಳು ಹಾಗೂ ಇರಬೇಕಿತ್ತು. ಕಾರಣ ಆಕೆ ಒಂದು ಹೆಣ್ಣಾಗಿದ್ದಳು.

ಹೆಣ್ಣು ಮಕ್ಕಳು ಹೆಚ್ಚು ಓದಬಾರದು, ಮುಚ್ಚಿದ ಬಾಗಿಲಿನ ಒಳಗೆ ಇರಬೇಕು ಎನ್ನುವ ನಿಯಮಗಳು ಹೆಣ್ಣಿನ ಆಶೋತ್ತರಗಳನ್ನು, ಅಭಿಪ್ರಾಯಗಳನ್ನು ಅವಳ ಸ್ವತಂತ್ರವನ್ನು ಬಾಚಿಕೊಳ್ಳುವುದೇ ಆಗಿದೆ. 'ಮಹಿಳೆಯನ್ನು ಎಲ್ಲಾ ಬಗೆಯಲ್ಲು ನಿಯಂತ್ರಿಸುವ ಪುರುಷಾಧಿಕಾರದ ಸಮಾಜ ಅವಳನ್ನು ಕುರಿತು ಹತ್ತು ಹಲವು ಬಗೆಯ ನಿರೀಕ್ಷೆಗಳನ್ನು ಹೊಂದಿದೆ. ಕೇವಲ ನಿರೀಕ್ಷೆಗಳಲ್ಲ, ಅವಳು ಎಂದಿಗೂ ದಾಟಲಾಗದ ನಿರ್ಬಂಧಗಳೇ, ಆದೇಶಗಳೇ ಎಂಬುವುದು ಮಹಿಳೆಯ ಅನುಭವ'.[4] ಈ ಎಲ್ಲಾ ಅಂಶಗಳನ್ನು ಒಳಗೊಂಡು ಹೆಣ್ಣಿನ ಶೋಷಣೆ ಹಾಗೂ ಗಂಡಿನ ದೌರ್ಜನ್ಯದೊಂದಿಗೆ ನಾಟಕ ತೆರೆದುಕೊಳ್ಳುತ್ತಾ ಹೋಗುತ್ತದೆ.

ಪುರುಷಪುರದ ಮಹಾರಾಜನಿಗೆ 8 ಜನ ಮಡದಿಯರಿದ್ದು 7 ಜನ ಹೆಂಡತಿಯರಿಗೆ ಒಂದೊಂದು ಗಂಡು ಮಗುವಿನ ಜನನವಾಗಿರುತ್ತದೆ. ಆದರೆ ಕೊನೆಯ ಹೆಂಡತಿಯಾದ ರಾಣಿಗೆ ಇನ್ನು ಮಗು ಜನಿಸಿರುವುದಿಲ್ಲ. ಎಲ್ಲಿ ಹೆಣ್ಣಾಗುತ್ತದೋ ಎಂದು ಆಕೆ ಭಯಗೊಂಡಿದ್ದಾಳೆ. ಜೊತೆಗೆ 'ಪುರುಷ ಪುರದ ರಾಜರಿಂದ ಹಿಡಿದು ಜನ ಸಾಮಾನ್ಯರವರೆಗೆ ಹೆಣ್ಣೆಂದರೆ ಎಲ್ಲರಿಗೂ ತಾತ್ಸರ'.

(ಪು. ಸಂ. 96) ನಮ್ಮ ಸಮಾಜದಲ್ಲಿ ಬೇರೂರಿರುವ ಹೆಣ್ಣು ಮಕ್ಕಳ ಬಗೆಗಿನ ಅನಾದಾರ ಎಷ್ಟೊಂದು ನಿಕೃಷ್ಟವಾಗಿದೆ ಎಂದರೆ ಆಸ್ಪತ್ರೆಯ ಸ್ಕ್ಯಾನಿಂಗ್ ಸೆಂಟರ್‌ಗಳು ಹೆಣ್ಣು ಭ್ರೂಣವೆಂದು ಪತ್ತೆಹಚ್ಚಿ ಕೊಲ್ಲುತ್ತಿವೆ. ಹೆಣ್ಣು ಮಗುವಿನ ಸಾವು ಹೆಣ್ಣು ಮಕ್ಕಳ ಬಗ್ಗೆ ಹೊಂದಿರುವ ಪೂರ್ವಾಗ್ರಹ ಪೀಡಿತದಿಂದ ಉಂಟಾಗುತ್ತಿದೆ. ಹಾಗಾಗಿ ಒಂದು ವೇಳೆ ಹೆಣ್ಣು ಮಗುವಿಗೆ ಜನ್ಮ ಕೊಟ್ಟರೆ ತನ್ನನ್ನು ಕೀಳಾಗಿ ನೋಡುತ್ತಾರೆ ಎಂಬ ಕೀಳರಿಮೆ ಹೆಣ್ಣನ್ನು ಬಾಧಿಸುತ್ತಿರುವುದು ಪ್ರಸ್ತುತಕ್ಕೂ ಹತ್ತಿರವಾದದ್ದೆ. 'ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂದು ಸಂಚಿ ಹೊನ್ನಮ್ಮ ತನ್ನ ಹದಿಬದೆಯ ಧರ್ಮದಲ್ಲಿ ಹೇಳಿದ್ದಾಳೆ. ಹೆಣ್ಣು ಹುಟ್ಟಿದರೆ ದುಃಖಿಸುವ ಈ ಜನ ತಮ್ಮನ್ನೆಲ್ಲ ಹಡೆದವಳು ಕೂಡ ಒಂದು ಹೆಣ್ಣು ಎಂಬುದನ್ನೇ ಮರೆತು ಬಿಡುತ್ತಾರೆ. 'ತೂರಬೇಡಿ ಗಾಳಿಗೆ ಹೆಣ್ತನದ ಘನತೆಯ, ಜೀವಕೊಡುವ ಜೀವವಿದು ಕಡಿಮೆ ಯಾರಿಗೆ?'[5] ಎಂದು ಹೇಳುವ ವಿಜಯ ದಬ್ಬೆ ಅವರ ಮಾತಿನಲ್ಲಿ ಹೆಣ್ಣಿನ ಔನ್ನತ್ಯ ಗುಣವಿದೆ. ಪ್ರಸ್ತುತ ಹೆಣ್ಣು ಭ್ರೂಣಗಳ ಹತ್ಯೆಯ ವಿರುದ್ಧ ಕಾನೂನುಗಳು ರಚಿತವಾಗಿದ್ದರೂ ಈ ಹೀನ ಕೃತ್ಯವನ್ನು ತಡೆಯುವಲ್ಲಿ ಸೋಲುತ್ತಿದೆ. ಈ ನಾಟಕದಲ್ಲಿನ ರಾಣಿಗೂ ಹೆಣ್ಣಾಗುವುದೆಂಬ ಭಯವಿದೆ. ಆದರೆ

**'ಮಂತ್ರಕ್ಕೆ ಮಾವಿನ ಹಣ್ಣು ಬೀಳದು**
**ಮಹಾರಾಣಿಯು ಹೆಣ್ಣು ಹೆತ್ತಳು' (ಪು. ಸಂ. 97)**

ಗಂಡು ಅಥವಾ ಹೆಣ್ಣು ಯಾವ ಮಗುವಿಗೆ ಜನ್ಮ ನೀಡಿದರೂ ತಾಯಿಯಾದವಳು ಸಮಾನವಾಗಿ ಕಂಡು ಸಮರ್ಥವಾಗಿ ನಿಭಾಯಿಸುವ ಶಕ್ತಿ ಹೊಂದಿರುತ್ತಾಳೆ. ಆದರೆ ಇಲ್ಲಿ ತಾಯಿಯೂ ಕೂಡ ಅಸಹಾಯಕಳಾಗಿದ್ದಾಳೆ. ಕಾರಣ ಹೆಣ್ಣಿನ ಬಗೆಗೆ ಈ ಸಮಾಜ ಹೊಂದಿರುವ ನಿಕೃಷ್ಟ ಮನೋಭಾವ ಹಾಗೂ ಹಿಂಸೆಯೇ ಇದಕ್ಕೆ ಕಾರಣವಾಗಿದೆ. ಹೆಣ್ಣು ದೇವತೆಯ ಸಮಾನ, ಆಕೆಯನ್ನು ಉಚ್ಚಸ್ಥಾನದಲ್ಲಿಟ್ಟು ಗೌರವಿಸಬೇಕು, ಪೂಜಿಸಬೇಕು ಎನ್ನುವುದೆಲ್ಲ ಮಾತಿಗಷ್ಟೇ ಸೀಮಿತವಾಗಿದೆ. ದಿನಬಳಕೆ ವಸ್ತುಗಳ ರೀತಿಯಲ್ಲಿ ಹೆಣ್ಣು ಬಳಕೆಯಾಗಿದ್ದಾಳೆ. ಹೆಣ್ಣು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಗೈಯುತ್ತಿದ್ದರೂ, ಇಂದಿಗೂ ಹೆಣ್ಣಿನ ಹುಟ್ಟು ಯಾರಿಗೂ ಬೇಡವಾಗಿದೆ. ತಮ್ಮ ವಂಶಾವಳಿಯನ್ನು ಮುಂದುವರೆಸುವ ಹಾಗೂ ತಮ್ಮನ್ನು ಸಾಕಿ ಸಲಹುವವರು ಗಂಡು ಮಕ್ಕಳೆಂಬ ಭ್ರಮೆ ಎಲ್ಲರನ್ನು ಆವರಿಸಿದೆ. ಪ್ರತಿ ಕುಟುಂಬವು ಗಂಡು ಜನ್ಮವನ್ನು ಹರಸುತ್ತಿರುವುದು ದುರಂತವೇ ಸರಿ.

'ಕುವರನಾದೊಡೆ ಬಂದ ಗುಣವೇನದರಿಂದ ಕುವರಿಯಾದೊಡೆ ಕುಂದೇನು' ಎಂದು ಹೇಳುವವರು ಕುವರಿಯಾದರೆ ಕುಟುಂಬಕ್ಕೆಕುಂದೆಂದು ಭಾವಿಸುತ್ತಾರೆ. ಪ್ರಸ್ತುತ ಈ ನಾಟಕದಲ್ಲೂ ಹಾಗೆಯೇ ಆಗಿದೆ. ಎಂಟನೇ ಮಡದಿ ರಾಣಿ ಹೆಣ್ಣು ಮಗು ಹಡೆದಿದ್ದಾಳೆ. ಆ ಹೆಣ್ಣು ಮಗುವಿಗೆ ಯಾವುದೇ ಪ್ರಾಶಸ್ತ್ಯ ಸಿಗುವುದಿಲ್ಲ. ಅವಳನ್ನು ಎಲ್ಲ ಅವಕಾಶಗಳಿಂದ ವಂಚಿತಳನ್ನಾಗಿ ಮಾಡುತ್ತಾರೆ. ಉಳಿದ 7 ರಾಜಕುಮಾರರಿಗೂ ಸಕಲ ಸೌಲಭ್ಯ ಹಾಗೂ ಸಾಮ್ರಾಜ್ಯದ ಕ್ಷೇಮಕ್ಕೆಂದು ಶಸ್ತ್ರಾಭ್ಯಾಸಗಳನ್ನು ಕಲಿಸುತ್ತಾರೆ. ಇದು ಸಹಜಾಳಿಗೆ ದೊರಕದು. ಹಠ ಬಿಡದ ಸಹಜಾಳು ಇತರೆ ರಾಜಕುಮಾರರಂತೆ ಕತ್ತಿವರೆಸೆ, ಕುದುರೆ ಸವಾರಿ ಹಾಗೂ ಯುದ್ಧ ಶಸ್ತ್ರಾಭ್ಯಾಸಗಳನ್ನು ಕಲಿಯಲು ಪ್ರಯತ್ನಿಸುತ್ತಾಳೆ. ಆದರೆ ಪುರುಷ ಪ್ರಧಾನ ಸಮಾಜ ಆಕೆ ಶಕ್ತಿ ಹೀನಳು, ಧೈರ್ಯವಿಲ್ಲದವಳೆಂದು ಇದೆಲ್ಲದರಿಂದ ಆಕೆಯನ್ನು ದೂರವಿರಿಸಿದೆ.

'ಹೆಣ್ಣು ಅಬಲೆ ಕುಸುಮ ಕೋಮಲೆ ಹೀಗೆ ಬಿಸಿಲಿಗೆ ಬಂದರೆ ಬಾಡಿ ಹೋಗುತ್ತಾಳೆ' ಎಂದು ಹೇಳುವ ನಾಟ್ಯಾಚಾರ್ಯರ ಮಾತುಗಳು ಹೆಣ್ಣಿನ ಬಗೆಗಿರುವ ತಾತ್ಸಾರದ ನುಡಿಗಳನ್ನು ತೋರಿಸುತ್ತದೆಯೇ ಹೊರತು ಕಾಳಜಿಯಲ್ಲ. ಈ ವ್ಯವಸ್ಥೆಗೆ ನಾಟ್ಯಾಚಾರ್ಯರಂತಹ ಗಂಡು ಮಾತ್ರ ಕಾರಣವಲ್ಲ ಎಂಬುದನ್ನು ನಾವು ಅರಿಯಬೇಕಿದೆ. ಗಂಡಿನಂತೆ ಹೆಣ್ಣು ಕೂಡ ಕಾರಣವಾಗಿದ್ದಾಳೆ. ಇದರ ಹೋರಾಟದ ದೆಸೆಗಳನ್ನು ರೂಪಿಸಿಕೊಳ್ಳುವುದು ಅಸಾಧ್ಯವಾಗಬಹುದು. ರಾಜಕುಮಾರರಂತೆ ಶಸ್ತ್ರಾಭ್ಯಾಸ, ಕುದುರೆ ಸವಾರಿ ಮೊದಲಾದವುಗಳನ್ನು ಕಲಿಯಲು ಮುಂದಾದ ಮಗಳನ್ನು ಒಪ್ಪದ ರಾಜ ಅದನ್ನೆ ಕಾರಣ ಮಾಡಿಕೊಂಡು ಸಹಜಾಳನ್ನು ಕಾಡಿನಲ್ಲಿ ಬಿಟ್ಟುಬರುವಂತೆ ಆದೇಶಿಸುತ್ತಾನೆ. ಆದರೆ ಅಲ್ಲಿ ಸಹಜಾ ಸಾಯುವುದಿಲ್ಲ, ಬದುಕುತ್ತಾಳೆ. ಕಾಡಿನ ಪ್ರಾಣಿಗಳ ಜೊತೆ ಬೆರೆಯುವ, ಕುದುರೆ ಸವಾರಿ ಮಾಡುವ ಸಾಹಸದ ಗುಣಗಳನ್ನು, ಪರಿಸರ ಕಾಳಜಿ ಮತ್ತಿತರ ಗುಣಗಳನ್ನು ಬೆಳೆಸಿಕೊಳ್ಳುತ್ತಾಳೆ. 'ಸ್ತ್ರೀ ಎಂದರೆ ಅವಳಿಗೆ ಮೃದುತ್ವದ ಗುಣಗಳನ್ನು ಆರೋಪಿಸಲಾಗಿದೆ. ಹೆಣ್ಣಿನ ಮಾತೃತ್ವವನ್ನು ವೈಭವೀಕರಿಸುವುದು, ಅವಳ ಬಸಿರು, ಬಾಣಂತಿತನ, ತಾಯ್ತನ ಇವುಗಳು ಬಹಳ ಮುಖ್ಯವಾದವು ಎಂದು ಹೇಳುತ್ತಾ, ಅವುಗಳೇ ಆದರ್ಶ, ಶ್ರೇಷ್ಠ ಎಂದು ಕೊಂಡಾಡುವುದು ಪುರುಷ ಪ್ರಧಾನ ವ್ಯವಸ್ಥೆಯ ಗುಣಗಳಾಗಿವೆ'.[6] ಅವು ಹೆಣ್ಣಿನ ಜೈವಿಕ ಲಕ್ಷಣಗಳೇ ಹೊರತು ಹೆಣ್ಣಿನ ಗುಣಗಳಲ್ಲ. ಹೆಣ್ಣಿಗೆ ಅವಕಾಶ ಸಿಕ್ಕರೆ ಆಕೆ ಸಬಲಳು, ಧೈರ್ಯವಂತಳು, ಅತ್ಯಂತ ಸಮರ್ಥಳು ಆಗಬಲ್ಲಳೆಂಬುದನ್ನು ಈ ಸಂದರ್ಭ

ಧ್ವನಿಸುತ್ತದೆ. ಹೊರಗಿನ ಪ್ರಪಂಚವೇ ಗೊತ್ತಿಲ್ಲದ ಸಹಜಾಳಿಗೆ ಮಳೆ ಹನಿಯು ಸಹ ಆಶ್ಚರ್ಯಗೊಳಿಸಿದೆ. ಪ್ರಾಣಿಗಳ ಜೊತೆಗಿನ ಸಹಜಾಳ ಮಾತುಕಥೆ ವಿಶೇಷವಾಗಿದ್ದು, ಪ್ರಾಣಿಗಳು ಇಂಗ್ಲೀಷ್‌ನಲ್ಲಿ ಸಂಭಾಷಣೆ ನಡೆಸುತ್ತವೆ. ಗ್ಲಾಡ್ ಟು ಮೀಟ್ ಯು, ಶೇಕ್ ಹ್ಯಾಂಡ್, ಶೇಕ್ ಲೆಗ್ಗೋ, ಬೋತ್ ಹೀಗೆ ಇತರೆ ಇಂಗ್ಲೀಷ್ ಪದಗಳನ್ನು ಪ್ರೇಕ್ಷಕರ ಮನರಂಜನೆಗಾಗಿ ಬಳಸಿದ್ದಾರೆ. ಸ್ವತಂತ್ರವಾದ, ಸಹಜವಾದ ಸಹಜಾಳ ಹೊಸಲೋಕವದು.

ನಾಟಕ ಈ ಸಂದರ್ಭದಲ್ಲಿ ತಿರುವನ್ನು ಪಡೆದುಕೊಳ್ಳುತ್ತದೆ. ಮಾಡಿದ ತಪ್ಪಿಗೆ ತಕ್ಕ ಪಾಠವನ್ನು ಕಲಿಯುವಂತೆ ತಾನೇ ವೀರ, ಶೂರ ಎಂದು ಬೀಗುತ್ತಿದ್ದ ಪುರುಷಪುರದ ಪುರುಷ ಸಿಂಹನಿಗೆ ಈಗ ಪೀಕಲಾಟ ಶುರುವಾಗಿದೆ. ಆತ ಸಮರ್ಥನಲ್ಲ, ನ್ಯಾಯಪರನಲ್ಲ, ನಿರಂಕುಶ ಮನೋಭಾವದವ. ಹಿಂದೆ ಕೆಲವು ರಾಜರು ರಾಜ್ಯವನ್ನು, ಪ್ರಜೆಗಳನ್ನು ಸುಭಿಕ್ಷೆಯಿಂದಿಡದೆ ಅದಕ್ಕೆ ಬದಲಾಗಿ ಪ್ರಜೆಗಳ ತಪ್ಪುಗಳನ್ನು ಹುಡುಕುತ್ತಾ, ಅವರನ್ನು ಶಿಕ್ಷಿಸುತ್ತಿದ್ದರು. ಇಂದಿನ ರಾಜಕೀಯ ಆಡಳಿತ ವ್ಯವಸ್ಥೆಯೂ ಕೂಡ ಹಾಗೆಯೇ ಇದೆ. ತಮ್ಮ ಲೋಪದೋಷಗಳನ್ನು ಮುಚ್ಚಿಡಲು ಸಮಾಜದಲ್ಲಿ ಗಲಭೆಯನ್ನುಂಟು ಮಾಡುವ ರಾಜಕಾರಣಿಗಳಿಗೇನೂ ಕಡಿಮೆಯಿಲ್ಲ. ನ್ಯಾಯ ವಿಷಯದಲ್ಲಿ ಕುರುಡರಾಗಿರುತ್ತಾರೆ. ಪ್ರಸ್ತುತ ನಾಟಕದಲ್ಲೂ ಒಮ್ಮೆ ಇಂತಹ ಸನ್ನಿವೇಶ ಬರುತ್ತದೆ. ‘ಪ್ರಭು ನಾನು ಬಡವಿ ಕಸದ ತೊಟ್ಟಿಯಲ್ಲಿ ಆಹಾರ ಪದಾರ್ಥಗಳನ್ನು ಅರಸುತ್ತಿದ್ದೆ ಕಳ್ಳತನ ಮಾಡಿಲ್ಲ ನನ್ನನ್ನು ಬಿಟ್ಟುಬಿಡಿ’ (ಪು. ಸಂ. 94) ಎಂದು ಬೇಡಿ ಅಂಗಲಾಚಿದರೂ ಕರುಣೆಯೂ ಇಲ್ಲದೇ ಯಾವುದನ್ನು ಪರಿಶೀಲಿಸದೆ ಈಕೆಗೆ ‘ಶಿಕ್ಷಿಸು’ ಎಂದು ಹೇಳುವುದು ಪ್ರಭುತ್ವದ ದೌರ್ಜನ್ಯವೇ ಆಗಿದೆ. ಇಂತಹ ರಾಜನ ಸಾಮ್ರಾಜ್ಯ ಪುರುಷ ಪುರಕ್ಕೆ 7 ದಿಕ್ಕುಗಳಿಂದ ಶತ್ರುಸೈನ್ಯ ನುಗ್ಗುತ್ತಿದೆ. ಇತ್ತ ಸುದ್ದಿ ತಿಳಿದ ಮಂತ್ರಿ ಸಿಕ್ಕಿದಷ್ಟು ಹಣ, ಚಿನ್ನವನ್ನು ದೋಚಿ ಪರಾರಿಯಾಗಿದ್ದಾನೆ. ಇನ್ನುಳಿದ 7 ಜನ ರಾಜಕುಮಾರರಲ್ಲಿ ಮೂವರು ಯುದ್ಧದಲ್ಲಿ ಸೋತು ಬಂಧಿಸಲ್ಪಟ್ಟಿದ್ದಾರೆ. ಇಬ್ಬರು ಕಪ್ಪ ಕಾಣಿಕೆಕೊಟ್ಟು ಅಡಗಿಕೊಂಡಿದ್ದಾರೆ. ಕೊನೆಯ ಇಬ್ಬರು ಯುದ್ಧದಲ್ಲಿ ಸೋತಿದ್ದಲ್ಲದೇ ಆ ರಾಜ್ಯದ ನರ್ತಕಿಯ ಅಂದಕ್ಕೆ ಮನಸೋತು ಅಲ್ಲಿಯೇ ಬೀಡುಬಿಟ್ಟಿದ್ದಾರೆ. 7 ಜನ ರಾಜಕುಮಾರರೂ ಸಹ ಯುದ್ಧವನ್ನು ಧೈರ್ಯದಿಂದ ಎದುರಿಸಲಾರದೆ ಪ್ರಾಣಭಯದಿಂದ ನುಣುಚಿಕೊಂಡಿದ್ದಾರೆ. ಗಂಡು ಸಂತಾನ ವೀರರು, ಶೂರರು, ಸಾಮ್ರಾಜ್ಯವನ್ನು ಉಳಿಸಿ ಬೆಳೆಸುತ್ತಾರೆ ಎಂಬೆಲ್ಲಾ ಭರವಸೆಗಳನ್ನು ಸುಳ್ಳು ಮಾಡಿದ್ದಾರೆ. ಶತ್ರುಸೈನ್ಯವನ್ನು

ಹೊಡೆದೋಡಿಸಬೇಕಾದವರು ಸೋತು ಶರಣಾಗಿದ್ದಾರೆ. ಯುದ್ಧದಲ್ಲಿ ಜಯಗಳಿಸಬೇಕೆಂಬ ಯಾವ ಶೌರ್ಯತ್ವವೂ ಅವರಲ್ಲಿ ಕಾಣಿಸಿಲ್ಲ. ಸ್ವತಃ ಮಹಾರಾಜ ಪುರುಷಸಿಂಹ ಕತ್ತಿಗಿಂತ ಲೇಖನಿ ಹರಿತವೆಂದು ಲೇಖನಿಯಿಂದ ಶತ್ರುಗಳಿಗೆ ಅರ್ಧರಾಜ್ಯಕೊಟ್ಟು ಶಾಂತಿ ಒಪ್ಪಂದ ಮಾಡಿಕೊಳ್ಳುವಲ್ಲಿ ಮುಂದಾಗುತ್ತಾನೆ. ಅಷ್ಟರಲ್ಲಾಗಲೇ ಶತ್ರುಸೈನ್ಯ ರಾಜ್ಯವನ್ನು ಪ್ರವೇಶಿಸಿ ರಾಜನನ್ನು ಸೆರೆಮನೆಗೆ ತಳ್ಳಿದೆ. ಇವರೆಲ್ಲಾ ಕೇವಲ ಆಡಂಬರದ ಶೌರ್ಯವನ್ನು ತೋರ್ಪಡಿಸುತ್ತಾ ಅಮಾಯಕ ಪ್ರಜೆಗಳನ್ನು ಶಿಕ್ಷಿಸುತ್ತಾ ಬದುಕುತ್ತಿದ್ದರೇ ಹೊರತು ಇವರು ನಿಜವಾದ ಪುರುಷಸಿಂಹಗಳಾಗಿರಲಿಲ್ಲ. ಪ್ರಜೆಗಳ, ಸಾಮ್ರಾಜ್ಯದ ಹಿತ ಕಾಯುವಲ್ಲಿ ವಿಫಲರಾಗಿದ್ದಾರೆ.

ರಾಜ್ಯದಲ್ಲಿ ಆಹಾರದ ಅಭಾವ ಹೆಚ್ಚಾಗಿ ಜೀವ ಉಳಿಸಿಕೊಳ್ಳಲು ಜನ ಕಾಡಿಗೆ ದೌಡಾಯಿಸುತ್ತಾರೆ. ಸಿಕ್ಕ ಸಿಕ್ಕ ಗೆಡ್ಡೆಗೆಣಸು, ಹಣ್ಣುಗಳನ್ನು ತಿಂದು ಜೀವ ಉಳಿಸಿಕೊಳ್ಳುತ್ತಿದ್ದಾರೆ. ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದಾರೆ. ಕಾಡಿನೊಳಗಿದ್ದ ರಾಜಕುಮಾರಿಗೆ ವಿಷಯ ತಿಳಿಯುತ್ತದೆ. ಆಕೆ ಅವರ ಬಳಿ ಪ್ರಶ್ನಿಸುತ್ತಾಳೆ. ಸಹಜಾಳು ಪುರುಷಪುರದ ಪುರುಷಸಿಂಹನ ಮಗಳು ಎಂದು ಗುರುತಿಸಿದ ಪ್ರಜೆಗಳು ನಡೆದ ಘಟನೆಗಳನ್ನೆಲ್ಲ ಪ್ರಸ್ತಾಪ ಮಾಡುತ್ತಾರೆ. ತಂದೆಯ ಮೇಲಿನ ಪ್ರೀತಿ, ಆಕೆಗಿನ್ನೂ ಕಡಿಮೆಯಾಗಿಲ್ಲ. ತಂದೆ ನೀಡಿದ ಅವಮಾನ ಹಿಂಸೆಗಳನ್ನೆಲ್ಲವನ್ನು ಮರೆತು ಕಾಡಿನ ಪ್ರಾಣಿಗಳ ಜೊತೆಯಲ್ಲಿ ನೆರೆದಿದ್ದ ಪ್ರಜೆಗಳನ್ನೆಲ್ಲ ಒಟ್ಟುಗೂಡಿಸಿ ಶತ್ರುಸೈನ್ಯವನ್ನು ಎದುರಿಸಲು ಮುಂದಾಗುತ್ತಾಳೆ, ಧೈರ್ಯವಾಗಿ ಹೋರಾಡುತ್ತಾಳೆ. ಬಂಧಿಸಿದ್ದ ತನ್ನ ತಂದೆಯನ್ನು ಬಿಡಿಸುತ್ತಾಳೆ. ಅಸಮರ್ಥಳು, ಅಸಹಾಯಕಳು ಎಂಬ ಮನೋಭಾವದಿಂದ ಯಾರು ನೋಡಿದರೋ ಅವರೇ ಇಂದು ಅಸಹಾಯಕರಾಗಿ ನಿಂತಿದ್ದಾರೆ. ಹೆಣ್ಣು ಶಕ್ತಿಶಾಲಿ, ಧೈರ್ಯಶಾಲಿ ಎಂಬುದನ್ನು ತನ್ನ ತಂದೆ ಹಾಗೂ ಸಾಮ್ರಾಜ್ಯವನ್ನು ಉಳಿಸುವ ಮೂಲಕ ಸಹಜಾ ತೋರಿಸಿಕೊಡುತ್ತಾಳೆ. ಈಗ ತಂದೆಗೆ ತನ್ನ ತಪ್ಪಿನ ಅರಿವಾಗಿದೆ. ಮಗಳ ಬಳಿ ಕ್ಷಮೆ ಕೇಳುತ್ತ 'ಮಗಳೇ ಇನ್ನು ಮುಂದೆ ಈ ರಾಜ್ಯವನ್ನು ಆಳುವ ನೈತಿಕ ಹಕ್ಕು ನನಗಿಲ್ಲ. ಜೊತೆಗೆ ದೈಹಿಕ ಸಾಮರ್ಥ್ಯವೂ ಕುಸಿಯುತ್ತಿದೆ. ಆದ್ದರಿಂದ ಈ ಸಿಂಹಾಸನದ ಜವಾಬ್ದಾರಿಯನ್ನು ಇಂದೇ ನಿನಗೆ ಒಪ್ಪಿಸುತ್ತೇನೆ.' (ಪು. ಸಂ. 109) ಎಂದು ಹೇಳಿದಾಗ ಸಹಜಾ ಅದಕ್ಕೆ ನಿರಾಕರಿಸಿ 'ಪುರುಷಪುರದ ಈ ರಾಜ್ಯದಲ್ಲಿ ಮಹಿಳೆ ಹೇಗೆ ಆಡಳಿತ ನಡೆಸಲು ಸಾಧ್ಯ? ನಾನು ಕಾಡಿನಲ್ಲೆ ಸುಖವಾಗಿರುತ್ತೇನೆ. ಹಾಳಾಗಿರುವ ಈ ನಾಡಿಗಿಂತ ಇದಾವ ಸೋಂಕಿಲ್ಲದ

ಹಾಗೆ ಬದುಕುತ್ತಿರುವ ಕಾಡುಪ್ರಾಣಿಗಳ ಜೊತೆ ನೆಮ್ಮದಿಯಾಗಿದ್ದೇನೆ. ನನಗೆ ಈ ಯಾವ ರಾಜ್ಯವೂ ಬೇಡ' ಎಂದು ಹೇಳುತ್ತಾಳೆ. ಆಗ ರಾಜ ಪುರುಷಪುರವೆಂದು ಇದ್ದ ರಾಜ್ಯದ ಹೆಸರನ್ನು ಮಾನವಪುರವೆಂದು ಮರುನಾಮಕರಣ ಮಾಡುತ್ತಾನೆ. ಮಗಳು ಸಹಜಾಳನ್ನು ರಾಜಕುಮಾರಿಯನ್ನಾಗಿ ಮಾಡಿ ರಾಜ್ಯದ ಜವಾಬ್ದಾರಿಯನ್ನು ಅವಳಿಗೆ ನೀಡುತ್ತಾನೆ. ಇಲ್ಲಿಗೆ ಕಥೆ ಮುಕ್ತಾಯದ ಹಂತ ತಲುಪುತ್ತದೆ.

ನಾಟಕದಲ್ಲಿ ಅನೇಕ ಪಾತ್ರಗಳಿದ್ದು ಕೆಲವು ಮುಖ್ಯಪಾತ್ರಗಳಾದರೆ, ಹಲವು ಪಾತ್ರಗಳು ಪೋಷಕವಾಗಿ ಬಂದಿವೆ. ಹಾಗೆಯೇ ನಾಟಕದೊಳಗೊಂದು ಕಥೆ ಹೇಳುವ, ಆ ಕಥೆಗೆ ಜೀವತುಂಬಿರುವ ಪಾತ್ರಗಳೂ ಕೂಡ ವಿಶೇಷವಾಗಿ ಕಾಣಿಸುತ್ತವೆ.

ಪುಟ್ಟ ಪುಟ್ಟಿ ಎಂಬ ಮಕ್ಕಳ ಪಾತ್ರಗಳ ಮೂಲಕ ಈ ನಾಟಕ ಪ್ರಾರಂಭವಾಗುತ್ತದೆ. ಇವರು ಈ ನಾಟಕದ ಸೂತ್ರಧಾರರೂ ಆಗಿದ್ದಾರೆ. ನಾಟಕದ ಕಥೆಯನ್ನು ವಿಶೇಷವಾಗಿ ಹಾಗೂ ವಿಭಿನ್ನವಾಗಿ ಅಭಿವ್ಯಕ್ತಿಸುವಲ್ಲಿ ಇವರು ಮುಖ್ಯ ಪಾತ್ರವಹಿಸುತ್ತಾರೆ. ಪ್ರೇಕ್ಷಕರನ್ನು ಸ್ವಾಗತಿಸುವುದು ಹಾಗೂ ಈ ನಾಟಕದೊಳಗೊಂದು ಕಥೆಯನ್ನು ಹೇಳಿಸಲು ನಿರೂಪಕಿ ಅಜ್ಜಿಯನ್ನು ಬರಮಾಡಿಕೊಳ್ಳುವ ರೀತಿ ವಿಶೇಷವಾಗಿದೆ. ಜೊತೆಗೆ ಪ್ರೇಕ್ಷಕರ ಆಸಕ್ತಿಯನ್ನು ಕೇಂದ್ರೀಕರಿಸುವಲ್ಲಿ ಹಾಗೂ ಮನರಂಜಿಸುವಲ್ಲಿ ಪುಟ್ಟ ಪುಟ್ಟಿ ಪಾತ್ರ ಮಹತ್ವದ್ದಾಗಿದೆ. ನಾಟಕದ ಪ್ರಾರಂಭದಲ್ಲಿ ಹಾಗೂ ಕೊನೆಯ ಭಾಗದಲ್ಲಿ ಕಾಣಿಸಿಕೊಂಡರೂ ನಾಟಕವನ್ನು ಸರಿದೂಗಿಸುವಲ್ಲಿ ಈ ಪಾತ್ರಗಳು ಪ್ರಧಾನ ಪಾತ್ರ ವಹಿಸುತ್ತವೆ.

ನಾಟಕದಲ್ಲಿ ಕಥೆಯನ್ನು ಹೇಳುವವಳು ಓರ್ವ ಅಜ್ಜಿ. ಈ ನಾಟಕದ ಮುಖ್ಯ ಕಥೆಗಾರ್ತಿಯಾಗಿದ್ದಾಳೆ. ಅಜ್ಜಿಯಿಂದ ಕಥೆ ಎಣೆದಿರುವುದು ಕೂಡ ಸ್ತ್ರೀ ಸಂವೇದನೆ ಹೊಂದಿರುವ ಈ ನಾಟಕಕ್ಕೆ ಪೂರಕವಾಗಿಯೇ ಇದೆ. ನಾಟಕದ ಪ್ರಾರಂಭದಲ್ಲಿ ಹಾಗೂ ಕೊನೆಯಲ್ಲಿ ಅಜ್ಜಿ ಕಂಡುಬಂದರೂ ಹೆಣ್ಣಿನ ವೇದನೆಯನ್ನು ಅವಳ ಮಾನಸಿಕ ತುಮುಲಗಳನ್ನು ಈಕೆಯ ಜೀವನಾನುಭವಗಳ ಜೊತೆಗೆ ಅಭಿವ್ಯಕ್ತಿಸಲಾಗಿದೆ. ಅನಾದಿ ಕಾಲದಿಂದಲೂ ಕಥೆ ಹೇಳುವುದು ಅಜ್ಜಿಯಂದಿರ ಕೆಲಸವಾಗಿದೆ. ಅದರಂತೆ ಈ ನಾಟಕದಲ್ಲೂ ಆ ಜವಾಬ್ದಾರಿಯನ್ನು ಹೊತ್ತಿದ್ದಾಳೆ. 'ಹೆಣ್ಣಿನ ಬಾಳೋ ಜೀವನವೆಲ್ಲ ಬರೀ ಗೋಳೊ' ಎಂಬ ಮಾತುಗಳಿಂದ ಈಕೆಯ ಪಾತ್ರ

ತೆರೆದುಕೊಳ್ಳುತ್ತದೆ. ಇಡೀ ನಾಟಕದ ಕಥಾವಸ್ತುವೇ ಈ ಮಾತಿನಲ್ಲಿ ಅಡಗಿದೆ. ತನ್ನ ಜೀವನದ ನೋವು ನಲಿವುಗಳನ್ನು ಇವಳು ಹೇಳುವ ಕಥೆಯಲ್ಲಿ ಚಿತ್ರಿಸಿರುವುದು ಈ ಪಾತ್ರದ ವಿಶೇಷತೆಯಾಗಿದೆ. ಹಾಗೆ ನೋಡಿದರೆ ಸಹಜಾ ಬೇರೆಯಲ್ಲ ಅಡುಗೂಲಜ್ಜಿ ಬೇರೆಯಲ್ಲ.

ಪುರುಷಪುರದ ರಾಜ ಪುರುಷಸಿಂಹ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಾನೆ. ಇಡೀ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿಡುವುದು ರಾಜನಾಗಿರುವವನ ಕರ್ತವ್ಯ. ಆದರೆ ಈ ನಾಟಕದಲ್ಲಿ ಆ ಜವಾಬ್ದಾರಿಯನ್ನು ಕಳೆದುಕೊಂಡಿದ್ದಾನೆ. ಜೊತೆಗೆ ಅದರ ವಿರುದ್ಧವಾಗಿ ವರ್ತಿಸಿದ್ದಾನೆ. ತಪ್ಪಿತಸ್ಥರಲ್ಲದವರನ್ನು ಶಿಕ್ಷಿಸುವುದು, ದಂಡಿಸುವುದು ಈತ ಮಾಡುವ ಕೆಲಸವಾಗಿದೆ. ಎಂಟು ಜನ ರಾಜಕುಮಾರಿಯರನ್ನು ವಿವಾಹವಾಗಿ ಗಂಡಿನ ಸ್ವಾತಂತ್ರ್ಯದ ದುರುಪಯೋಗ, ದರ್ಪ ಮತ್ತು ಗಂಡಿನ ಮೋಹವನ್ನು ಪ್ರತಿನಿಧಿಸಿದ್ದಾನೆ. ಸ್ತ್ರೀ ಬಗೆಗೆ ಕೀಳರಿಮೆ ಹಾಗೂ ತಾತ್ಸಾರದ ಮನೋಭಾವವನ್ನು ಹೊಂದಿದ್ದಾನೆ. ಸ್ವತಃ ಮಗಳಾದ ಸಹಜಾಳನ್ನು ಅಸಮರ್ಥಳಾಗಿ, ಅಸಹಾಯಕಳಾಗಿ ಕಾಣುತ್ತಾ ಸ್ತ್ರೀ ಬಗೆಗೆ ಪೂರ್ವಾಗ್ರಹ ಪೀಡಿತನಾಗಿದ್ದಾನೆ. ಪುರುಷಪುರದ ಸಾಮ್ರಾಜ್ಯವನ್ನು ಕಾಯಲು ಎಂಟು ದಿಕ್ಕುಗಳಲ್ಲೂ ಎಂಟು ಜನ ಕುಮಾರರನ್ನು ಅಪೇಕ್ಷಿಸುವ ಮೂಲಕ ಪುರುಷ ವ್ಯಾಮೋಹಿಯೂ, ಸ್ತ್ರೀ ದ್ವೇಷಿಯೂ ಆಗಿದ್ದಾನೆ. ರಾಜನ ವೈಭೋಗದ ಹಾಗೂ ದುರಾಡಳಿತವನ್ನು ಕೊನೆಗಾಣಿಸಲು ಎಂಟು ದಿಕ್ಕುಗಳಿಂದ ಶತ್ರುಸೈನ್ಯ ಸಾಮ್ರಾಜ್ಯವನ್ನು ಆವರಿಸಿ ತನ್ನನ್ನೂ ಒಳಗೊಂಡಂತೆ ತನ್ನ ಏಳು ಜನ ಕುಮಾರರನ್ನು ಬಂಧಿಸುತ್ತಾರೆ. ಕೊನೆಗೆ ತಿರಸ್ಕಾರಕ್ಕೆ ಒಳಗಾದ ತನ್ನ ಮಗಳು ಸಹಜಾಳೇ ರಾಜ್ಯವನ್ನು ಹಾಗೂ ರಾಜನನ್ನು ಕಾಪಾಡುವಲ್ಲಿ ಯಶಸ್ವಿಯಾಗುತ್ತಾಳೆ. ರಾಜನಿಗೆ ತನ್ನ ತಪ್ಪಿನ ಅರಿವಾಗಿ ಅಸಮರ್ಥಳು, ಅಸಹಾಯಕಳು ಎಂದುಕೊಂಡಿದ್ದ ತನ್ನ ಮಗಳು ಸಹಜಾಳನ್ನು ಶಕ್ತಿಶಾಲಿ, ಧೈರ್ಯಶಾಲಿ ಈಕೆ ಅಬಲೆಯಲ್ಲ ಸಬಲಳು ಎಂದು ಪುರುಷಪುರವೆಂಬ ಸಾಮ್ರಾಜ್ಯದ ಹೆಸರನ್ನು ಮಾನವಪುರವೆಂದು ಮರು ನಾಮಕರಣ ಮಾಡಿ ತನ್ನ ಮಗಳನ್ನು ರಾಣಿಯಾಗಿ ನೇಮಕ ಮಾಡುತ್ತಾನೆ. ಇಲ್ಲಿ ರಾಜ ಪುರುಷ ಪ್ರಧಾನ ವ್ಯವಸ್ಥೆಯ ಪ್ರತಿನಿಧಿಯಾಗಿ ಕಾಣಿಸಿಕೊಂಡರೂ ತದನಂತರ ಮನಃಪರಿವರ್ತನೆಗೊಳ್ಳುತ್ತಾನೆ. ಸ್ತ್ರೀಯನ್ನು, ಆಕೆಯ ಧೈರ್ಯವನ್ನು, ಆಕೆಯ ಹೃದಯ ವೈಶಾಲ್ಯತೆಯನ್ನು ಒಪ್ಪಿ ಆಕೆಗೂ ಪುರುಷನಷ್ಟೇ ಸಮಾನ

ಅವಕಾಶಗಳನ್ನು ನೀಡಬೇಕು ಎಂಬ ಅರಿವು ಆತನಿಗುಂಟಾಗುತ್ತದೆ.

ಮೇಳದವರು ಹಾಗೂ ಕಾಡುಪ್ರಾಣಿಗಳು ನಾಟಕದ ಮನರಂಜನೆಗೆ ಬೆನ್ನೆಲುಬಾಗಿವೆ. ಸೇನಾಧಿಪತಿ, ಸೇವಕಿಯರು, ಮಂತ್ರವಾದಿ, ಬೇಟೆಗಾರರು, ಗುರುಗಳು, ನಾಟ್ಯಾಚಾರ್ಯ ಇತ್ಯಾದಿ ಪಾತ್ರಗಳು ಸನ್ನಿವೇಶಗಳಿಗೆ ತಿರುವುಗಳನ್ನು ಕೊಡುತ್ತವೆ.

ಮೂಢನಂಬಿಕೆ, ಶೋಷಣೆ, ದೌರ್ಜನ್ಯ, ಭೇದಭಾವ, ಅಸಮಾನತೆ, ಭ್ರಷ್ಟಾಚಾರ ಮುಂತಾದವು ಸದಾ ಸಮಾಜವನ್ನು ಬಾಧಿಸುತ್ತವೆ. ಪ್ರಸ್ತುತ ಈ ನಾಟಕದಲ್ಲಿ ಸ್ತ್ರೀಶೋಷಣೆ ಅಂತೆಯೇ ಅಸಮಾನತೆ ಕುರಿತು ವಿಚಾರವಿದೆ. ಹೆಣ್ಣು ಅಬಲೆಯಲ್ಲ ಸಬಲಳು ಎಂಬುದನ್ನು ಹೇಳ ಹೊರಟಿದೆ. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ಶೋಷಣೆ, ದೌರ್ಜನ್ಯ, ತಾತ್ಸಾರ ಮನೋಭಾವ, ಕೀಳರಿಮೆ ಈ ಎಲ್ಲವನ್ನು ವಿಶ್ಲೇಷಿಸುವ, ವಿಮರ್ಶೆಗೆ ಒಳಪಡಿಸುವ ಕೆಲಸವನ್ನು ಈ ನಾಟಕ ಮಾಡಿದೆ. ಪುರುಷನಷ್ಟೇ ಸ್ತ್ರೀಗೂ ಸಮಾನ ಅವಕಾಶ ಕೊಡಬೇಕು, ಸ್ತ್ರೀಗೂ ಪುರುಷನಷ್ಟೇ ಸಾಮರ್ಥ್ಯವಿದೆ. ಆದರೆ ಅವಳನ್ನು ಕಡೆಗಣಿಸಿ ಅವಕಾಶ ವಂಚಿತಳನ್ನಾಗಿ ಮಾಡಲಾಗಿದೆ. ನಮ್ಮದು ಪುರುಷಶಾಹಿ ವ್ಯವಸ್ಥೆಯ ಸಮಾಜ. ಇಲ್ಲಿ ಪುರುಷರೇ ಪ್ರಭುಗಳು, ಮಹಿಳೆಯರು ಪುರುಷರ ಆಜ್ಞಾಪಾಲಕರು. ವಸ್ತುಸ್ಥಿತಿ ಹೀಗಿರುವಾಗ ಪುರುಷನ ದಬ್ಬಾಳಿಕೆ ಹಿಂಸೆಯ ಪ್ರತಿರೂಪವಾಗಿರುತ್ತದೆ. ಕೌಟುಂಬಿಕಕ್ರೌರ್ಯದಪರಿಣಾಮದಿಂದಲೇಹೆಣ್ಣುಅಸಹಾಯಕಳಾಗಿದ್ದಾಳೆ. ಹೆಣ್ಣು ಮಕ್ಕಳು ಹುಟ್ಟಿದರೆ ಮನೆಗೆ ಹೊರೆಯಾಗುತ್ತಾರೆ ಎಂಬ ಭಾವನೆ ಸಾಮಾನ್ಯನಿಂದ ಶ್ರೀಮಂತರವರೆವಿಗೂ ಇದೆ. ಈ ಮನೋಭಾವನೆಯನ್ನು ತೊಡೆದುಹಾಕಬೇಕು. ಅದಕ್ಕಾಗಿಯೇ ಇಂದು ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಆದರೂ ಸ್ತ್ರೀ ಶೋಷಣೆ ಮತ್ತು ದೌರ್ಜನ್ಯ ಸಂಪೂರ್ಣವಾಗಿ ನಿಂತಿಲ್ಲ. ವರದಕ್ಷಿಣೆ, ಅತ್ಯಾಚಾರಗಳಂತಹ ಕೃತ್ಯಗಳು ನಡೆಯುತ್ತಲೇ ಇವೆ. ಇದು ಕೊನೆಗಾಣಬೇಕು. ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಆಕೆಗೆ ಇರುವ ಸ್ಥಾನಮಾನವನ್ನು ಗೌರವಿಸಬೇಕು ಹಾಗೂ ಅವರಿಗೂ ಸಮಾನ ಅವಕಾಶವನ್ನು ನೀಡಬೇಕು. ಹೆಣ್ಣು ಸಾಕಾರಮೂರ್ತಿ, ತ್ಯಾಗಮಯಿ, ಕರುಣೆವುಳ್ಳವಳು, ಗಂಡಿಗಿಂತ ಹೆಣ್ಣು ತಾಳ್ಮೆವುಳ್ಳವಳು, ತಂದೆ ತಾಯಿಯನ್ನು ಪೋಷಿಸುವ, ಸಲಹುವ ಗುಣ ಹೆಣ್ಣಿಗೆ ಹೆಚ್ಚಿದೆ ಎಂದೆಲ್ಲಾ ಹೇಳಲಾಗುತ್ತದೆ.

ಅವೆಲ್ಲಾ ವಾಸ್ತವವೇ ಆದರೂ ಹೇಳುವಷ್ಟಕ್ಕೆ ನಿಲ್ಲಬಾರದು. ಆಕೆಯ ಮೇಲಿನ ಶೋಷಣೆ ನಿಲ್ಲಬೇಕು, ತಾನೇ ಹಾಕಿರುವ ಬಂಧನ ಕಳಚಬೇಕು, ಸ್ವಾತಂತ್ರ್ಯವನ್ನು ಕೊಡಬೇಕು. 'ಮನೆ ಮನೆಯಲ್ಲಿ ದೀಪ ಮುಡಿಸಿ, ಹೊತ್ತುಹೊತ್ತಿಗೆ ಅನ್ನವ ಉಣಿಸಿ, ತಂದೆ ಮಗುವ ತಬ್ಬಿದಾಕೆ'[7] ಎನ್ನುತ್ತಾರೆ ಜಿ. ಎಸ್. ಶಿವರುದ್ರಪ್ಪನವರು. ಇಂದು ಸ್ತ್ರೀ ತನಗೆ ಹಾಕಿದ ಎಲ್ಲೆಗಳನ್ನು ಮೀರಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢಳೆಂದು ಸಾಬೀತುಪಡಿಸಿದ್ದಾಳೆ. ಹಾಗಾಗಿ ಹೆಣ್ಣಿನ ಬಗೆಗಿರುವ ಪೂರ್ವಾಗ್ರಹ ಪೀಡಿತ ಮನೋಭಾವವನ್ನು ತೊಡೆದು ಹಾಕಿ ಕವಿ ಡುಂಡಿರಾಜರು ಎಂದಿನಂತೆ ತಮ್ಮ ಹಾಸ್ಯದ ಧಾಟಿಯಲ್ಲಿಯೇ ಅಭಿವ್ಯಕ್ತಿಸಿದ್ದಾರೆ. ಪುರುಷ ಪ್ರಧಾನ ಸಮಾಜವನ್ನು ವಿಮರ್ಶೆಗೆ ಒಳಗುಮಾಡಿದ್ದಾರೆ. ಸಾಮಾಜಿಕ ಸಮಸ್ಯೆಗಳ ವೈಚಾರಿಕ ಅರಿವಿನೊಂದಿಗೆ ಈ ನಾಟಕ ಸಶಕ್ತವಾಗಿ ಮೂಡಿಬಂದಿದೆ. ಹಾಸ್ಯದ ನೆಲೆಯ ನಿರೂಪಣ ಶೈಲಿ, ಅರ್ಥಪೂರ್ಣ ಹಾಡುಗಳು, ನೃತ್ಯ, ವೈವಿಧ್ಯಮಯವಾದ ದೃಶ್ಯಗಳು ಪ್ರೇಕ್ಷಕರನ್ನು ರಂಜಿಸುತ್ತಾ ಸ್ತ್ರೀ ಅಬಲೆಯಲ್ಲ ಸಬಲಳು ಎಂಬುದನ್ನು ಸಾರುತ್ತದೆ.

## ಉಪಸಂಹಾರ

ಮಕ್ಕಳ ನಾಟಕವಾಗಿ ಅಜ್ಜಿಕಥೆ ಉತ್ತಮವಾಗಿ ಮೂಡಿಬಂದಿದೆ. ಸ್ತ್ರೀ ಸಂವೇದನೆಯನ್ನು ಹಾಸ್ಯದ ಮೂಲಕ ಅಭಿವ್ಯಕ್ತಿಸಿರುವುದು ಕವಿಯ ಕಲೆಗಾರಿಕೆಯಾಗಿದೆ. ಎಲ್ಲಿಯೂ ಕ್ಲಿಷ್ಟ ಸಂಭಾಷಣೆಯಾಗಲಿ ಹಾಗೂ ಬೇಸರಪಡಿಸುವ ದೃಶ್ಯಗಳಾಗಲಿ ಕಾಣಿಸುವುದಿಲ್ಲ. ಹಾಸ್ಯದ ಜೊತೆಜೊತೆಗೆ ಪ್ರೇಕ್ಷಕರನ್ನು, ಓದುಗರನ್ನು ಚಿಂತನ ನೆಲೆಗೆ ಕರೆದೋಯ್ದು ಆಲೋಚಿಸುವಂತೆ ಮಾಡುತ್ತದೆ. ನಾಟಕದ ಅಂತ್ಯದಲ್ಲಿ ನಿಂತು ನೋಡಿದಾಗ ಅಜ್ಜಿ, ರಾಜಕುಮಾರ, ಆತನ ಮಕ್ಕಳು, ಮಡದಿಯರು ಹಾಗೂ ಮುಖ್ಯಪಾತ್ರವೆನಿಸುವ ಸಹಜಾಳು ಇಲ್ಲಿ ಮುಖ್ಯವೆನಿಸುವುದಿಲ್ಲ. ಹೆಣ್ಣು ಅಬಲೆಯಲ್ಲ ಆಕೆ ಸಬಲಳು ಎಂಬುದಷ್ಟೆ ಮುಖ್ಯವಾಗುತ್ತದೆ. ಸಮಾಜದಲ್ಲಿ ಬದುಕುತ್ತಿರುವ ಎಲ್ಲರೂ ಕೂಡ ಒಂದೇ. ಅವರಲ್ಲಿ ಯಾವುದೇ ಮೇಲು-ಕೀಳು, ಸ್ತ್ರೀ-ಪುರುಷ, ಬಡವ-ಬಲ್ಲಿದ ಎಂದು ತಾರತಮ್ಯ ಮಾಡಬಾರದು. ಎಲ್ಲರಿಗೂ ಸಮಾನ ಸ್ಥಾನಮಾನ, ಸಮಾನ ಅವಕಾಶ, ಸಮಾನ ಗೌರವಗಳನ್ನು ಕೊಡಬೇಕು. ಅಂದಾಗಲೇ ಮಾತ್ರ ದೇಶದಲ್ಲಿ ಸಮಾನತೆಯನ್ನು ತರಲು, ಏಕತೆಯನ್ನು ಸಾಧಿಸಲು ಸಾಧ್ಯ. ಒಟ್ಟಾರೆಯಾಗಿ

ಈ ನಾಟಕ ಸ್ತ್ರೀಯು ಪುರುಷನಷ್ಟೇ ಸಮರ್ಥಳು, ಆಕೆಗೂ ಎಲ್ಲದರಲ್ಲೂ ಅವಕಾಶ ಮಾಡಿಕೊಡಿ, ಮೌಢ್ಯತೆಗೆ ಒಳಗಾಗಿ ಎಲ್ಲದರಿಂದ ಆಕೆಯನ್ನು ದೂರವಿರಿಸಬೇಡಿ. ಗಂಡಿಗೆ ಅಸಾಧ್ಯವಾದದ್ದನ್ನು ಹೆಣ್ಣು ಸಾಧಿಸಿ ತೋರಿಸಿದ್ದಾಳೆ. ಆದರೆ ಹಿಂದಿನಿಂದಲೂ ಬಂದ ರೂಢಿ ಸಂಪ್ರದಾಯಗಳು, ಹೆಣ್ಣನ್ನು ಶೋಷಿಸುತ್ತ ಅವಳನ್ನು ಅಸಹಾಯಕಳಾಗಿ ಮಾಡಿದೆ. ದೈಹಿಕವಾಗಿ ಆಕೆ ಬಲಹೀನಳು ಎಂದು ಸಮಾಜವೇ ಆಕೆಯ ಕೆಲಸವನ್ನು ನಿರ್ಧರಿಸುತ್ತಿದೆ. ಆದರೆ ಹೆಣ್ಣು ಕೂಡ ಸಮರ್ಥಳು ಎಂಬುದನ್ನು ಈ ನಾಟಕ ಸಾರುತ್ತದೆ. ಜೊತೆಗೆ ಹೆಣ್ಣಿಗೆ ತ್ಯಾಗ, ಸಹನೆ, ಧೈರ್ಯ ಈ ಎಲ್ಲಾ ಗುಣಗಳು ಇದೆ. ಹಾಗಾಗಿ ಅವಳನ್ನು ಕೀಳಾಗಿ ಕಾಣುವುದಾಗಲಿ ಆಕೆಯನ್ನು ತಾತ್ಸಾರ ಮಾಡುವುದಾಗಲಿ ಸಲ್ಲದು. ಅವಳಿಗೂ ಸಮಾನ ಗೌರವ, ಸಮಾನ ಅವಕಾಶ, ಪ್ರೋತ್ಸಾಹವನ್ನು ನೀಡಬೇಕು. ನೀಡಿದಾಗ ಮಾತ್ರ ಲಿಂಗ ತಾರತಮ್ಯ ರಹಿತ ಸಮಾಜವನ್ನು ನಿರ್ಮಿಸಲು ಸಾಧ್ಯ. ಹೆಣ್ಣು ಭ್ರೂಣಹತ್ಯೆಯನ್ನು ತಡೆಯಲು ಸಾಧ್ಯ. ಸ್ವಸ್ಥ್ಯ ಸಮಾಜವನ್ನು ನಿರ್ಮಿಸಲು ಸಾಧ್ಯ.

## ಅಡಿಟಿಪ್ಪಣಿಗಳು:


1. ಅ.ನ.ಕೃ. (2004). ಸಾಹಿತ್ಯ ಮತ್ತು ಕಾಮಪ್ರಚೋದನೆ. ಸಾಗರ್ ಪ್ರಕಾಶನ. ಬೆಂಗಳೂರು. ಪು. ಸಂ. 42
2. ಶ್ರೀಮತಿ ಎಚ್. ಎಸ್. (2012). ಸ್ತ್ರೀವಾದ: ತಾತ್ವಿಕತೆ. ಪ್ರಗತಿ ಗ್ರಾಫಿಕ್ಸ್. ಬೆಂಗಳೂರು. ಪು. ಸಂ. 377
3. ಮಂಜುಳ ಮಾನಸ. (2013). ಮಹಿಳಾ ಸಬಲೀಕರಣ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಪು. ಸಂ. 57
4. ಶ್ರೀಮತಿ ಎಚ್. ಎಸ್. (2012). ಸ್ತ್ರೀವಾದ: ತಾತ್ವಿಕತೆ. ಪ್ರಗತಿ ಗ್ರಾಫಿಕ್ಸ್. ಬೆಂಗಳೂರು. ಪು. ಸಂ. 373
5. ಪ್ರೀತಿ ಶುಭಚಂದ್ರ, (ಸಂ. ) & ಸುಮನಾ ಎಂ. ಎನ್. (2015). ಸಾಕಾರದತ್ತ ಸಮಾನತೆಯ ಕನಸು. ಲಡಾಯಿ ಪ್ರಕಾಶನ. ಗದಗ. ಬೆನ್ನುಡಿ.
6. ನಾಗಮಣಿ ಜಿ. (2019). ದಲಿತ ಮಹಿಳಾ ಚಳುವಳಿ ಅಧ್ಯಯನ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಪು. ಸಂ. 51
7. ಶಿವರುದ್ರಪ್ಪ ಜಿ. ಎಸ್. (2011). ಜಿ. ಎಸ್. ಶಿವರುದ್ರಪ್ಪನವರ ಸಮಗ್ರ ಕಾವ್ಯ. ಕಾಮಧೇನು ಪುಸ್ತಕ ಭವನ. ಬೆಂಗಳೂರು. ಪು. ಸಂ. 324

## ಪರಾಮರ್ಶನ ಗ್ರಂಥಗಳು:


1. ಡುಂಡಿರಾಜ್ ಎಚ್. (2009). ಕಾಯೋ ಕಲ್ಪ ಮತ್ತು ಇತರೆ ನಾಟಕಗಳು. ಅಂಕಿತ ಪುಸ್ತಕ ಪ್ರಕಾಶನ. ಬೆಂಗಳೂರು.
2. ಡುಂಡಿರಾಜ್ ಎಚ್. (2020). ಡುಂಡಿ ಮಲ್ಲಿಗೆ. ತೇಜು ಪಬ್ಲಿಕೇಶನ್. ಬೆಂಗಳೂರು.
3. ಡುಂಡಿರಾಜ್ ಎಚ್. (2015). ವಿನೋದ ಸೌಧದಲ್ಲಿ ಡುಂಡಿರಾಜ್. ಅಂಕಿತ ಪುಸ್ತಕ ಪ್ರಕಾಶನ. ಬೆಂಗಳೂರು.
4. ಅ.ನ.ಕೃ. (2004). ಸಾಹಿತ್ಯ ಮತ್ತು ಕಾಮಪ್ರಚೋದನೆ. ಸಾಗರ್ ಪ್ರಕಾಶನ. ಬೆಂಗಳೂರು.
5. ಶ್ರೀಮತಿ ಎಚ್. ಎಸ್. (2012). ಸ್ತ್ರೀವಾದ: ತಾತ್ವಿಕತೆ. ಪ್ರಗತಿ ಗ್ರಾಫಿಕ್ಸ್. ಬೆಂಗಳೂರು.
6. ಮಂಜುಳ ಮಾನಸ. (2013). ಮಹಿಳಾ ಸಬಲೀಕರಣ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
7. ಪ್ರೀತಿ ಶುಭಚಂದ್ರ (ಸಂ.) & ಸುಮನಾ ಎಂ. ಎನ್. (2015). ಸಾಕಾರದತ್ತ ಸಮಾನತೆಯ ಕನಸು. ಲಡಾಯಿ ಪ್ರಕಾಶನ.
8. ನಾಗಮಣಿ ಜಿ. (2019). ದಲಿತ ಮಹಿಳಾ ಚಳುವಳಿ ಅಧ್ಯಯನ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
9. ಶಿವರುದ್ರಪ್ಪ ಜಿ. ಎಸ್. (2011). ಜಿ. ಎಸ್. ಶಿವರುದ್ರಪ್ಪನವರ ಸಮಗ್ರ ಕಾವ್ಯ. ಕಾಮಧೇನು ಪುಸ್ತಕ ಭವನ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.